| | | |
|---|---|---|
| ಅಭ್ಯಾಸ ಪತ್ರಿಕೆಯ ಸಂಖ್ಯೆ : WT_7S_4.2_DSERT | | ಕರ್ನಾಟಕ ಮಂಡಳಿ |
| ತರಗತಿ : 7 | ವಿಷಯ : ವಿಜ್ಞಾನ | ದಿನಾಂಕ : 05/07/2021 |
| ಅಧ್ಯಾಯದ ಕ್ರಮ ಸಂಖ್ಯೆ ಹಾಗು ಹೆಸರು : ಉಷ್ಣ | | |
| ಉಪ ಅಧ್ಯಾಯ : ಪೀಠಿಕೆ, ಬಿಸಿ ಮತ್ತು ತಂಪಿನ ನಡುವೆ ವ್ಯತ್ಯಾಸ | | |
| | | |

| | |
|---|---|
| | ವಿಭಾಗ - **1** |
| ಪ್ರಶ್ನೆ 1 | ಈ ಹೇಳಿಕೆಗಳು ಸರಿಯಾಗಿದ್ದರೆ T ಎಂದು ಅಥವಾ ತಪ್ಪಾಗಿದ್ದರೆ F ಎಂದು ಗುರುತಿಸಿ. |
| (ಕ) | ಬೇಸಿಗೆಯಲ್ಲಿ ಮನೆಯ ಒಳಗೆ ಯಾವಾಗಲು ತಂಪಾಗಿರುತ್ತದೆ. |
| ಉತ್ತರ | F<br><br>ಕಾರಣ : ಬೇಸಿಗೆಯಲ್ಲಿ ಮನೆಯ ಒಳಗೆ ಸೆಖೆಯ ಅನುಭವವಾಗುತ್ತದೆ |
| | |
| (ಖ) | ಹೆಚ್ಚು ಬಿಸಿಯಿರುವ ವಸ್ತುಗಳನ್ನು ನಾವು ಮುಟ್ಟಬಹುದು. |
| ಉತ್ತರ | F |
| | |
| ಪ್ರಶ್ನೆ 2 | ಸರಿಯಾದ ಉತ್ತರವನ್ನು ಆರಿಸಿ.<br><br>ಬೇಸಿಗೆಯಲ್ಲಿ ನೀವು ಯಾವ ಬಟ್ಟೆಯನ್ನು ಧರಿಸುತ್ತೀರ?<br><br>ಅ)ಉಣ್ಣೆ ಆ) ರೇಷ್ಮೆ ಇ)ಹತ್ತಿ ಈ)ಎಲ್ಲವೂ |
| ಉತ್ತರ | ಇ)ಹತ್ತಿ |
| | |
| | ವಿಭಾಗ - **2** |

| | |
|---|---|
| ಪ್ರಶ್ನೆ 3 | ಬಿಟ್ಟ ಸ್ಥಳಗಳನ್ನು ತುಂಬಿರಿ.<br>ಒಂದು ವಸ್ತುವಿನ ಉಷ್ಣತೆಯ ಮಟ್ಟದ ಅಳತೆ,_______ |
| ಉತ್ತರ | ಒಂದು ವಸ್ತುವಿನ ಉಷ್ಣತೆಯ ಮಟ್ಟದ ಅಳತೆ ತಾಪ |
| | |
| ಪ್ರಶ್ನೆ 4 | ವಸ್ತುವು ಬಿಸಿಯಾಗಿದ್ದರೆ 'ಬಿಸಿಯಾದ ವಸ್ತು' ಎಂದು ಮತ್ತು ತಣ್ಣಗಿದ್ದರೆ 'ತಣ್ಣನೆಯ ವಸ್ತು' ಎಂದು ಬರೆಯಿರಿ.<br>ಅ)ಬಾಣಲೆ-________<br>ಆ)ಹಣ್ಣಿನ ರಸ-_______<br>ಇ) ಉರಿಯುವ ಮೋಂಬತ್ತಿ-_______<br>ಈ)ಐಸ್ ಕ್ರೀಮ್-_______<br>ಉ)ಲೋಟದಲ್ಲಿರುವ ಚಹಾ-_______ |
| ಉತ್ತರ | ಅ)ಬಾಣಲೆ- ಬಿಸಿಯಾದ ವಸ್ತು<br>ಆ)ಹಣ್ಣಿನ ರಸ- ತಣ್ಣನೆಯ ವಸ್ತು<br>ಇ) ಉರಿಯುವ ಮೋಂಬತ್ತಿ- ಬಿಸಿಯಾದ ವಸ್ತು<br>ಈ)ಐಸ್ ಕ್ರೀಮ್- ತಣ್ಣನೆಯ ವಸ್ತು<br>ಉ)ಲೋಟದಲ್ಲಿರುವ ಚಹಾ- ಬಿಸಿಯಾದ ವಸ್ತು |
| | |
| ವಿಭಾಗ - **3** | |
| | ಈ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. |
| ಪ್ರಶ್ನೆ 5 | ಬಿಸಿ ಮತ್ತು ತಂಪು ನಡುವಿನ ವ್ಯತ್ಯಾಸವೇನು? |
| ಉತ್ತರ | ಶೀತ ಅಥವಾ ತಂಪು ಎಂದರೆ ಕಡಿಮೆ ತಾಪಮಾನವನ್ನು ಹೊಂದಿರುತ್ತದೆ, ಆದರೆ ಬಿಸಿ ಎಂದರೆ ಹೆಚ್ಚಿನ ತಾಪಮಾನವನ್ನು ಹೊಂದಿರುತ್ತದೆ. |
| | |

| | |
|---|---|
| ಪ್ರಶ್ನೆ 6 | ನಮ್ಮ ದಿನನಿತ್ಯದ ಜೀವನದಲ್ಲಿ ಬಳಸುವ ಬಿಸಿ ಮತ್ತು ತಣ್ಣನೆಯ ವಸ್ತುಗಳನ್ನು ಪಟ್ಟಿ ಮಾಡಿ. |
| ಉತ್ತರ | ನಮ್ಮ ದಿನನಿತ್ಯದ ಜೀವನದಲ್ಲಿ ಬಳಸುವ ಬಿಸಿ ವಸ್ತುಗಳು : ಬಾಣಲೆ, ಕಾಯುತ್ತಿರುವ ಎಣ್ಣೆ, ಒಲೆ, ಚಹಾ, ಉರಿಯುವ ಮೋಂಬತ್ತಿ.<br>ನಮ್ಮ ದಿನನಿತ್ಯದ ಜೀವನದಲ್ಲಿ ಬಳಸುವ ತಣ್ಣನೆಯ ವಸ್ತುಗಳು: ಐಸ್ ಕ್ರೀಮ್, ಹಣ್ಣಿನ ರಸ |
| | |
| ಪ್ರಶ್ನೆ 7 | ಒಂದು ನಿರ್ದಿಷ್ಟ ಋತುಮಾನಕ್ಕೆ ನಿರ್ದಿಷ್ಟ ವಿಧವಾದ ಬಟ್ಟೆಗಳೇ ಏಕೆ ಸೂಕ್ತ? |
| ಉತ್ತರ | ಚಳಿಗಾಲದಲ್ಲಿ ವಾತಾವರಣ ತಂಪಾಗಿ ಇರುತ್ತದೆ. ನಮ್ಮನ್ನು ನಾವು ಚಳಿಯಿಂದ ರಕ್ಷಿಸಿಕೊಳ್ಳಲು ಉಣ್ಣೆಯ ಉಡುಪುಗಳನ್ನು ಧರಿಸುತ್ತೇವೆ. ಉಣ್ಣೆಯ ಉಡುಪುಗಳು ನಮ್ಮ ದೇಹವನ್ನು ಬೆಚ್ಚಗಿರಿಸುತ್ತವೆ. ಬೇಸಿಗೆಯಲ್ಲಿ ತುಂಬಾ ಸೆಖೆ ಇರುತ್ತದೆ. ಆದ್ದರಿಂದ ಬೇಸಿಗೆಯಲ್ಲಿ ನಾವು ತಿಳಿದಾದ ಹತ್ತಿಯ ಬಟ್ಟೆಗಳನ್ನು ಧರಿಸಲು ಇಚ್ಛಿಸುತ್ತೇವೆ. ಅವು ನಮಗೆ ತಂಪಾದ ಅನುಭವವನ್ನು ನೀಡುತ್ತವೆ. |
| | |
| ಪ್ರಶ್ನೆ 8 | ತಾಪಮಾಪಕವನ್ನು ವ್ಯಾಖ್ಯಾನಿಸಿ. |
| ಉತ್ತರ | ವಸ್ತುವಿನ ಉಷ್ಣತೆಯ ಮಟ್ಟದ ಒಂದು ವಿಶ್ವಾಸನೀಯ ಅಳತೆಯೇ ತಾಪ. ತಾಪವನ್ನು ಅಳೆಯುವ ಸಾಧನ ತಾಪಮಾಪಕ. |
| | |
| | ವಿಭಾಗ **-4** |
| | ಈ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. |
| ಪ್ರಶ್ನೆ 9 | ಬಿಸಿಯಾದ ಮತ್ತು ತಣ್ಣನೆಯ ವಸ್ತುಗಳ ನಡುವಿನ ವ್ಯತ್ಯಾಸವನ್ನು ವಿವರವಾಗಿ ವಿವರಿಸಿ, ಒಂದು ವಸ್ತುವು ಹೆಚ್ಚು ಬಿಸಿಯಾಗಿದೆ ಎಂದು ನೀವು ಹೇಗೆ ತಿಳಿಯಬಹುದು?. |
| ಉತ್ತರ | ಬೆಳಗ್ಗೆ ಮತ್ತು ಸಂಜೆ ವೇಳೆಯಲ್ಲಿ ತಂಪಾದ ಅನುಭವವನ್ನು ಮತ್ತು ಮಧ್ಯಾಹ್ನದ ವೇಳೆಯಲ್ಲಿ ಬೆಚ್ಚಗಿನ ಅನುಭವವನ್ನು ಪಡೆಯುತ್ತೇವೆ. ಇದಕ್ಕೆ ಕಾರಣ ನಾವು ಪಡೆಯುವ ಸೂರ್ಯನ ವಿಕಿರಣಗಳಲ್ಲಿನ ವ್ಯತ್ಯಾಸ. ಉಷ್ಣತೆ "ಕಾವು" ಅಥವಾ "ಬಿಸಿ" ಅಥವಾ "ಉಷ್ಣ" ಒಂದು ಶಕ್ತಿರೂಪವಾಗಿದೆ. ಶೀತ ಅಥವಾ ತಂಪು ಎಂದರೆ ಕಡಿಮೆ ತಾಪಮಾನವನ್ನು ಹೊಂದಿರುತ್ತದೆ, ಆದರೆ ಬಿಸಿ ಎಂದರೆ ಹೆಚ್ಚಿನ ತಾಪಮಾನವನ್ನು ಹೊಂದಿರುತ್ತದೆ. |
| | |

eVidyaloka
To Educate - Anywhere Anytime

| | |
|---|---|
| ಪ್ರಶ್ನೆ 10 | ವಿವಿಧ ಋತುಮಾನಗಳಲ್ಲಿ ಬಳಸುವ ವಿವಿಧ ಬಟ್ಟೆಗಳ ಪ್ರಾಮುಖ್ಯತೆಯ ಬಗ್ಗೆ ವಿವರವಾಗಿ ವಿವರಿಸಿ. |
| ಉತ್ತರ | ಚಳಿಗಾಲದಲ್ಲಿ ಮನೆಯ ಒಳಗೆ ತಣ್ಣನೆಯ ಅನುಭವವಾಗುತ್ತದೆ. ಚಳಿಗಾಲದಲ್ಲಿ ವಾತಾವರಣ ತಂಪಾಗಿ ಇರುತ್ತದೆ. ನಮ್ಮನ್ನು ನಾವು ಚಳಿಯಿಂದ ರಕ್ಷಿಸಿಕೊಳ್ಳಲು ಉಣ್ಣೆಯ ಉಡುಪುಗಳನ್ನು ಧರಿಸುತ್ತೇವೆ. ಉಣ್ಣೆಯ ಉಡುಪುಗಳು ನಮ್ಮ ದೇಹವನ್ನು ಬೆಚ್ಚಗಿರಿಸುತ್ತವೆ. ನಾವು ಹೊರಗಿನ ಬಿಸಿಲಿಗೆ ಬಂದರೆ ಬೆಚ್ಚನೆಯ ಅನುಭವವಾಗುತ್ತದೆ. ಬೇಸಿಗೆಕಾಲದಲ್ಲಿ ನಮಗೆ ಮನೆಯ ಒಳಗೆ ಸೆಕೆಯ ಅನುಭವವಾಗುತ್ತದೆ. ಬೇಸಿಗೆಯಲ್ಲಿ ತುಂಬಾ ಸೆಖೆ ಇರುತ್ತದೆ. ಆದ್ದರಿಂದ ಬೇಸಿಗೆಯಲ್ಲಿ ನಾವು ತಿಳಿದಾದ ಹತ್ತಿಯ ಬಟ್ಟೆಗಳನ್ನು ಧರಿಸಲು ಇಚ್ಚಿಸುತ್ತೇವೆ. ಅವು ನಮಗೆ ತಂಪಾದ ಅನುಭವವನ್ನು ನೀಡುತ್ತವೆ. |
| | |
| | |

eVidyaloka
To Educate - Anywhere Anytime